# ಭಯೋತ್ಪಾದನೆ V/S ಸೇವೆ



ಒಂದನೇ ಕ್ಲಾಸಿನಲ್ಲಿ ಕಲಿಯುತ್ತಿರುವ ಮಗುವಿನಲ್ಲಿ 'ಅತ್ಯಂತ ಅಪಾಯಕಾರಿಯಾದ ವಸ್ತು ಯಾವುದು' ಎಂದು 1015 ಚರ್ಷಗಳ ಹಿಂದೆ ಕೇಳಿದ್ದರೆ, ಆ ಮಗು 'ನಾಗರ ಹಾವು, ಕಾಳಿಂಗ ಸರ್ಪ, ಗರ್ನಾಲು, ತೋಟೆ, ಟೀಚರ್‌ರ ಬೆತ್ತ, ಹುಲಿ, ಭೂತ.. ಎಂದೆಲ್ಲಾ ಖಂಡಿತ ಹೇಳುತ್ತಿತ್ತು. ಇವತ್ತು ಅದೇ ಪ್ರಶ್ನೆಯನ್ನು ಭಯೋತ್ಪಾದನೆಯ ಯಾವ ಕರಿ ನೆರಳೂ ಇಲ್ಲದ ಪ್ರದೇಶದಲ್ಲಿ, ಕೆ.ಜಿ ಕ್ಲಾಸಿನಲ್ಲಿ ಕಲಿಯುತ್ತಿರುವ ಮಗುವಿನಲ್ಲಿ ಕೇಳಿ ನೋಡಿ, ಭಯೋತ್ಪಾದನೆ, ಬಾಬು, ಬಂದೂಕು ಎಂದೆಲ್ಲಾ ಥಟ್ಟನೆ ಹೇಳಿ ಬಿಟ್ಟಾವು. ಒಂದು ವೇಳೆ ಕುತೂಹಲ ತಡೆಯಲಾರದೆ ಭಯೋತ್ಪಾದನೆಯ ಬಗ್ಗೆ ಸಣ್ಣ ಡೆಫಿನೇಶನ್ ಕೇಳಿ ಬಿಟ್ಟರೆ, ಗಡ್ಡ, ಪೈಜಾಮ, ಟೊಪ್ಪಿ ಮುಂತಾದವುಗಳೆನ್ನೆಲ್ಲಾ ಮುಲಾಜಿಲ್ಲದೆ ಹೇಳಿಯಾವು. ನಿಜವಾಗಿ ಈ ಮಕ್ಕಳು ಬಾಂಬನ್ನು ನೋಡಿಯೇ ಇಲ್ಲ. ಬಂದೂಕು ಬಾಂಬು ಸ್ಫೋಟ ಮುಂತಾದವುಗಳ ಪರಿಚಯವೂ ಇಲ್ಲ. ಅವರು ಯಾಕೆ ತಾವು ನೋಡದ, ಅನುಭವಿಸದ ಒಂದನ್ನು ಭಯೋತ್ಪಾದಕ ಎಂದು ಬೊಟ್ಟು ಮಾಡುತ್ತವೆ. ನಿಜವಾಗಿಯೂ ಈ ಮಕ್ಕಳು ನಾಯಿಯ ಬೊಗಳುವಿಕೆಯನ್ನು ಭಯೋತ್ಪಾದಕ ಅನ್ನಬೇಕಿತ್ತು. ಟೀಚರ ಬೆತ್ತವನ್ನು ಭಯೋತ್ಪಾದಕ ಎಂದೆನ್ನಬೇಕಿತ್ತು. ಹಾಗೆಯೇ ಬೈಗುಳ, ಹೊಡೆದಾಟ ಇತ್ಯಾದಿ ಇತ್ಯಾದಿಗಳನ್ನೂ. ಯಾಕೆಂದರೆ ಈ ಮಕ್ಕಳು ನಿತ್ಯದ ಬದುಕಿನಲ್ಲಿ ಇವೆಲ್ಲವನ್ನು ಎದುರಿಸುತ್ತಿರುತ್ತಾರೆ. ನಾಯಿಯ ಬೊಗಳುವಿಕೆಗೆ ಬೆಚ್ಚಿಬಿದ್ದು, ಓಡಿ ಹೋಗುವ ಮಗುವೊಂದು, ಅದನ್ನು ಭಯೋತ್ಪಾದನೆ ಎಂದು ಯಾಕಾಗಿ ನಮಗನಿಸುವುದಿಲ್ಲ ? ನಿಜವಾಗಿ ನಾವು ಸದ್ಯ ಇಲ್ಲಿ ಏನನ್ನು ಬೆಳೆಸಿದ್ದೇವೆಯೋ ಅದರ ಫಸಲನ್ನು ಮಕ್ಕಳಲ್ಲಿ ಕಾಣುತ್ತಿದ್ದೇವೆ. ಈ ಹಿಂದೆ ಮಕ್ಕಳ ಮಟ್ಟಿಗೆ ಅವುಗಳ ಪರಿಸರದಲ್ಲಿ ಏನೆಲ್ಲಾ ಆಗುತ್ತಿತ್ತೋ ಅದೇ ಭೀತಿಕಾರಕ ಆಗುತ್ತಿತ್ತು. ಇವತ್ತು ಮಾಧ್ಯಮಗಳು ಏನೆಲ್ಲಾ ಹೇಳುತ್ತಿದೆಯೋ ಅದನ್ನೇ ಈ ಮಕ್ಕಳು ಭೀತಿ ಭಯ ಹುಟ್ಟಿಸುವಂಥದ್ದು ಎಂದು ಹೇಳುತ್ತಾ ಇವೆ. ಇಂಥ ವಾತವಣ ನಿಜವಾಗಿ ಸೇವಾ ನಿರತ ಸಂಸ್ಥೆಗಳಿಗೆ ಅತ್ಯುತ್ತಮವಾದುದು. ಒಂದು ವೇಳೆ ಇಂಥ ಸಂಸ್ಥೆಗಳು ಸೇವೆ ಮತ್ತು ಸಂತ್ವನದ ಒಂದು ವಾತವರಣವನ್ನು ಪರಿಸರದಲ್ಲಿ ಬೆಳೆಸಿ ಬಿಟ್ಟರೆ, ಭವಿಷ್ಯದ ಪೀಳಿಗೆಗಳು ತಮ್ಮ ಅಪಾಯಕಾರಿ ವಸ್ತುವಿನ ಪಟ್ಟಿಯಿಂದ 'ಭಯೋತ್ಪಾದನೆ, ಪೈಜಾಮ, ಬಾಂಬುಗಳನ್ನು ಕಿತ್ತು ಹಾಕಿ, ಆ ಜಾಗದಲ್ಲಿ, ದಯೆಯಿಲ್ಲದ, ಅಸೂಯೆ ಪಡುವ, ಮಾನವೀಯತೆಯಿಲ್ಲದ ಮತ್ತು ಸದಾ ದ್ವೇಷ ಹರಡುವ' ಸ್ವಭಾವವನ್ನು ಅಪಾಯಕಾರಿ ವಸ್ತು ಎಂದು ನಮೂದಿಸಿ ಬಿಟ್ಟಾವು.

ಸಾಮ್ರಾಜ್ಯ ಶಾಹಿ ಜಗತ್ತು ನಮ್ಮನ್ನು ಕೆಲವು ವಿಷಯಗಳಲ್ಲಿ ಸದಾ ಚರ್ಚಾ ನಿರತರಾಗಿರುವಂತೆ ವಿರ್ಧರಿಸಿ ಬಿಟ್ಟಿವೆ. ನಮಗೆ ಅಗತ್ಯವಿಲ್ಲದಿದ್ದರೂ ಭಯೋತ್ಪಾದನೆ ಸಹಿತ, ಅವರೇ ಹುಟ್ಟು ಹಾಕಿದ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಾ ನಿಜವಾಗಿಯೂ ಯಾವುದರ ಬಗ್ಗೆ ಚರ್ಚಿಸಬೇಕಿತ್ತೂ ಅದರಿಂದ ಅವು ದೂರ ನಿಲ್ಲುವಂತೆ ತಡೆದಿಟ್ಟಿದ್ದೇವೆ. ಆದ್ದರಿಂದಲೇ ಇಸ್ಲಾಮ್ ಅತ್ಯಂತ ಪ್ರಾಶಸ್ತ್ಯ ಕೊಟ್ಟು ಮತ್ತು ಒಂದು ರೀತಿಯಲ್ಲಿ ಇಸ್ಲಾಮಿನ ಪಸರುವಿಕೆಯಲ್ಲಿ ಅತ್ಯಮೂಲ್ಯ ಪಾತ್ರ ನಿರ್ವಹಿಸಿದ ಸೇವೆಯ ಬಗ್ಗೆ ಚರ್ಚಿಸುವುದಕ್ಕೆ ನಮಗೆ ಪುರುಸೊತ್ತು ಇಲ್ಲವಾಗಿದೆ. ಸಮಾಜ ಸೇವೆ ಇಲ್ಲದ ಧರ್ಮವೊಂದು ಸಮಾಜಮುಖಿಯಾಗಲು ಸಾಧ್ಯವಿಲ್ಲ.

ಪ್ರವಾದಿ (ಸ) ನನ್ನ ಸಮಾಜ ಸೇವೆಯ ಗುಣದಿಂದಲೇ ಎಲ್ಲರ ಆತ್ಮೀಯರೆನಿಸಿಕೊಂಡರು. 'ನೆರಯವನು ಹಸಿದಿರುವಾಗ ಹೊಟ್ಟೆ ತುಂಬಾ ಉಣ್ಣುವವನು ನನ್ನವನಲ್ಲ' ಎಂಬ ಪ್ರವಾದಿ ವಚನದಲ್ಲಿ ದೊಡ್ಡದೊಂದು ಪಾಠ ಇದೆ. ಪವಿತ್ರ ಕುರ್‌ಆನ್ ನರಕ ಮತ್ತು ಸ್ವರ್ಗವಾಸಿಗಳ ಸಂಭಾಷಣೆಯನ್ನು ಉಲ್ಲೇಖಿಸುತ್ತದೆ. ಅದರಲ್ಲಿ ಸ್ವರ್ಗದವರು ನರಕವಾಸಿಗಳೊಡನೆ, "ನೀವು ಹೇಗೆ ಈ ಸ್ಥಾನಕ್ಕೆ ಬಂದಿರಿ" ಎಂದು ಕೇಳುವಾಗ ನರಕವಾಸಿಗಳು ಹೇಳುತ್ತಾರೆ– ನಾವು ಹಸಿದವರಿಗೆ ಉಣಿಸುತ್ತಿರಲಿಲ್ಲ.

ಅದ್ದರಿಂದ ಸಮಾಜದ ಪಾಲಿನ ಅವಶ್ಯಕತೆಗಳನ್ನು ಪೂರೈಸುವುದೆಂದರೆ ಅದು ಸ್ವರ್ಗದಲ್ಲಿ ಸ್ಥಾನ ಖಚಿತ ಪಡಿಸುವುದು ಎಂದರ್ಥ. ಸಾಮಾಜಿಕವಾಗಿ ಇವತ್ತು ಸಂಘರ್ಷದ ವಾತಾವರಣ ಇದೆ. ಯಾವ ಕ್ಷಣದಲ್ಲೊ ಸ್ಫೋಟಿಸಬಹುದಾದ ಕಿಡಿಯೊಂದರ ಮೇಲೆ ನಾವೆಲ್ಲ ನಿಂತಿದ್ದೇವೆ. ಇವತ್ತು ಕೋಮು ಗಲಭೆಯಾಗುವುದಕ್ಕೆ ನಿರ್ಧಿಷ್ಟ ಕಾರಣಗಳೇನು ಬೇಕಾಗಿಲ್ಲ. ನಾವೆಲ್ಲ ಕ್ಷುಲ್ಲಕವೆಂದು ಭಾವಿಸುವ ಮತ್ತು ಹೆಚ್ಚು ಆಳವಾಗಿ ನೋಡಿದರೆ, ಧರ್ಮಕ್ಕೂ ಮತ್ತು ಪ್ರಸ್ತುತ ಕೃತ್ಯಕ್ಕೂ ಯಾವ ಸಂಬಂಧವೂ ಇಲ್ಲದಂತಹವೂ ಕೂಡ ಗಂಬೀರ ಕೋಮು ಗಲಭೆಗೆ ಕಾರಣವಾಗುವುದಿದೆ. ಇದನ್ನು ಹೇಗೆ ನಿಲ್ಲಿಸುವುದು ?

ಬಹಳ ಮುಖ್ಯವಾಗಿ ನಾವು ಬೇಡವೆಂದರೂ ಕೂಡ, ಕೆಲವು ವಿಷಯಗಳು ಅನಿವಾರ್ಯವಾಗಿ ನಮ್ಮನ್ನು ಸುತತುವರೆದಿವೆ. ಜಾಗತೀಕರಣವು ಇವತ್ತು ಎಲ್ಲಾ ವರ್ಗದ ಮಂದಿಯ ಮಧ್ಯೆ ಒಂದು ರೀತಿಯ ತಲ್ಲಣ ಮತ್ತು ಅನುಮಾನವನ್ನು ಖಂಡಿತಾ ಹುಟ್ಟುಹಾಕಿದೆ. ಒಂದು ಕಡೆ ಅಪ್ಪಟ ಭೌತಿಕವಾದಿಗಳನ್ನು ಅವರು ತಯಾರಿಸುತ್ತಿರುವ ಹಾಗೇನೇ ಇನ್ನೊಂದು ಕಡೆ ಆಸ್ತಿಕರನ್ನು ಒಂದು ರೀತಿಯ ಅಪಾಯಕಾರಿಗಳಂತೆ ಬಿಂಬಿಸುವುದಕ್ಕೆ ಅದು ತನ್ನ ಸರ್ವಸಾಧ್ಯ ಕಾಣಿಕೆಗಳನ್ನು ನೀಡುತ್ತದೆ. ಜಗತ್ತಿನ ಕೆಲವು ಕುಬೇರ ಕಂಪೆನಿಗಳು ಉತ್ಪನ್ನಗಳನ್ನು ತಯಾತಿಸಿ ಆ ಉತ್ಪನ್ನಗಳ ಖರ್ಚಿಗಾಗಿ ಭ್ರಮೆಗಳನ್ನು ಸೃಷ್ಟಿಸುತ್ತಾ ಅದಕ್ಕೆ ತಕ್ಕಂತೆ ಮಾಧ್ಯಮಗಳನ್ನು ಬಳಸಿ, ಜನರನ್ನು ಬ್ರಾಮಿಕಾ ಲೋಕದಲ್ಲಿ ತೇಲುವಂತೆ ಮಾಡುತ್ತಿವೆ. ಜನರು ಈ ಉತ್ಪನ್ನಗಳನ್ನು ಮನೆ ತುಂಬಿಸಿವುದೇ ಪ್ರಸ್ಟೇಜು ಎಂದು ಭಾವಿಸುವ ಮೂಲಕ ಅದಕ್ಕಾಗಿ ಹಗಲಿರುಳು ನ್ಯಾಯ–ಅನ್ಯಾಯವೆನ್ನದೆ ದುಡಿಯುತ್ತಾರೆ. ನಮ್ಮ ಸರಕಾರಿ ಅಧಿಕಾರಿಗಳು ಮಾತ್ರವಲ್ಲ ಮೇಲಿನಿಂದ ತೀರಾ ಕೆಳಗಿನವರೆಗೆ ದೇಶದ ಒಟ್ಟು ವ್ಯವಸ್ಥೆ ಕೆಟ್ಟು ಹೋಗಿರುವುದಕ್ಕೆ ಮಾನವನಲ್ಲಿ ತುಂಬಲಾದ ಈ ದುರಾಸೆಗೆ ಪ್ರಥಮ ಸ್ಥಾನವಿದೆ. ಇಂಥ ಸ್ಥಿತಿಯಲ್ಲಿ ತನ್ನಂತಿರುವ ಇನ್ನೊಬ್ಬ ಮನುಷ್ಯನ ಬಗ್ಗೆ ಆಲೋಚಿಸುವುದು, ಅವನ ಕಷ್ಟಕ್ಕೆ ನೆರವಾಗುವುದು ಮುಂತಾದುಗಳೆಲ್ಲಾ ತೀರಾ ಅನಗತ್ಯದ ವಿಚಾರಗಳಿಗಾಗಿ, ತಾನು ತನ್ನದು ಎಂಬುದೇ ಪ್ರಾಮುಖ್ಯವಾಗಿಬಿಡುತ್ತದೆ.

ಪ್ರವಾದಿ ಮತ್ತು ಅವರ ಅನುಯಾಯಿಗಳು ಮದೀನಕ್ಕೆ ಹೋದ ಬಳಿಕ, ಅಲ್ಲಿನ ಅವರ ಅನುಯಾಯಿ ವರ್ಗ ಅವರ ಜೊತೆ ಯಾವ ಸಂಬಂಧವನ್ನು ಏರ್ಪಡಿಸಿಕೊಂಡರೆಂದರೆ, ತಮ್ಮ ಆಸ್ತಿಯಲ್ಲಿ ಅರ್ಧಪಾಲನ್ನು ಮಕ್ಕಾದಿಂದ ಬಂದ ಪ್ರವಾದಿ ಅನುಯಾಯಿಗಳಿಗೆ ನೀಡಿದರು. ಅಂಗಡಿಯಲ್ಲೂ ಅರ್ಧ ಪಾಲು ನೀಡಿದರು. ಒಟ್ಟಿನಲ್ಲಿ ಅದೊಂದು ಮಾನಸಿಕ ಸಂಬಂಧ ಏರ್ಪಟ್ಟಿತ್ತು. ತ್ಯಾಗವೊಂದೇ ಇಂಥದ್ದನ್ನು ಸಾಧ್ಯವಾಗಿಸಿದ್ದು. ಇಸ್ಲಾಮ್ ಪರಿಚಯ ಪಡಿಸುವ ವಿಚಾರ ಇದೆಯಲ್ಲ ಅದು ತ್ಯಾಗದ್ದು, ಸೇವೆಯದ್ದು, ಅದು ಸಮರ್ಪಕ ರೀತಿಯಲ್ಲಿ ಜಾರಿಯಾಗಿಬಿಟ್ಟರೆ, ಈ ಸಮಾಜ ಮಾತ್ರವಲ್ಲ ಜಗತ್ತೇ ನಮ್ಮದಾಗುವುದು.

ಬಹಳ ಮುಖ್ಯವಾಗಿ ನಾವಿಂದು ಈ ಪ್ರಮುಖ ಸಂಗತಿಯನ್ನು ಮರೆತು ಬಿಟ್ಟಿದ್ದೇವೆ ಅಥವಾ ಅದನ್ನು ಬಲವಂತವಾಗಿ ಧರ್ಮದಿಂದ ಆಚೆಗಿಟ್ಟಿದ್ದೇವೆ. ನಿಜವಾಗಿ ಮನುಷ್ಯನ ನಡುವೆ ಸೇವೆಯ ಸ್ನೇಹದ, ಪ್ರೀತಿಯ ಸಂಬಂಧವನ್ನು ಇರಿಸಿಕೊಳ್ಳುವ ಮತ್ತು ತೀವ್ರ ಭೌತಿಕವಾದವನ್ನು ಒಪ್ಪದವರನ್ನು ಇಂದಿನ ಕೊಳ್ಳುಬಾಕ ಸಂಸ್ಕೃತಿ ಅಪಾಯಕಾರಿಗಳಂತೆ ಬಿಂಬಿಸುತ್ತಾ ಇದೆ. ನಿಜವಾಗಿ ಇವತ್ತು ಸಾಮ್ರಾಜ್ಯಶಾಹಿತ್ವದ ಮೊದಲ ಶತ್ರು ಯಾವುದೋ ಒಂದು ರಾಷ್ಟ್ರವಲ್ಲ ಸರ್ವಾಧಿಕಾರಿಯೋ ಇವೆಲ್ಲವೇ ಯಾವುದೋ ಒಂದು ಪಕ್ಷವೋ ಅಲ್ಲ. ಧರ್ಮವನ್ನು ನಿಜವಾದ ಅರ್ಥದಲ್ಲಿ ಯಾರೆಲ್ಲ ಪಾಲಿಸುತ್ತಾರೋ, ಅವರ ಬಗ್ಗೆ ಸಾಮ್ರಜ್ಯಶಾಹಿತ್ವಕ್ಕೆ ತೀವ್ರ ಸಿಟ್ಟಿದೆ. ತಮ್ಮ ಭವುಕ ಜಗತ್ತಿನೊಳಗೆ ಅವರನ್ನು ಸೆಳೆಯಲು ಸಾಧ್ಯವಿಲ್ಲವೆಂದು ತಿಳಿದುಕೊಂಡಿರುವ ಅದು ಜನರು ತಮ್ಮ ವಿರುದ್ಧ ಧ್ವನಿ ಎತ್ತದಂತೆ ತಡೆಯುವುದಕ್ಕಾಗಿ ಧರ್ಮಗಳ ನಡುವೆ ಸಂಘರ್ಷವೇರ್ಪಡಿಸುವ ಸ್ಥಿತಿಯನ್ನು ನಿರ್ಮಿಸಿವೆ. ಎಂ.ಆರ್.ಪಿ.ಎಲ್ ಇಲ್ಲಿ ತಲೆವೂರುವ ಮೊದಲು ಸುರತ್ಕಲ್ ಗಲಭೆ ಸ್ಫೋಟಿಸಿತು. ಜನ ಪರಸ್ಪರ ತಲ್ಲಾಡುತ್ತಿದ್ದಾಗ ಅದು ತನ್ನ ನೆಲೆಯನ್ನು ಬಲಪಡಿಸಿಕೊಂಡಿತು. ಇದೀಗ ದ.ಕನ್ನಡ ಜಿಲ್ಲೆಯಲ್ಲಿ 2 ಸಾವಿರಕ್ಕಿಂತ ಹೆಚ್ಚು ಎಕರೆ ಪ್ರದೇಶವನ್ನು ನುಂಗಿಹಾಕಲು ಬೃಹತ್ ಕಂಪೆನಿಗಳು ತೀವ್ರ ಸಾಹಸದಲ್ಲಿ ತೊಡಗಿವೆ. ಅದರ ಪ್ರತಿಫಲವೆಂಬಂತೆ ಗಲಭೆಗಳು ಅಲ್ಲಲ್ಲಿ ಸ್ಫೋಟಿಸುತ್ತಿವೆ. ಒಂದು ಪ್ರದೇಶದಲ್ಲಿ ಪದೇ ಪದೇ ಜಗಳ, ಘರ್ಷಣೆ ನಡೆಯುತ್ತಿದ್ದರೆ, ಆ ಪ್ರದೇಶದ ಮಂದಿ ಸಹಜವಾಗಿಯೇ ಅದನ್ನು ಮೂರು ಕಾಸಿಗೆ ಮಾರಲು ಸಿದ್ಧವಾಗುತ್ತಾರೆ. ವಲಸೆ ಹೋಗಲು ತಯಾರಾಗುತ್ತಾರೆ. ಅಂಥದ್ದೊಂದು ಪರಿಸ್ಥಿತಿಯನ್ನು ನಿರ್ಮಿಸಲು ಬೃಹತ್ ಯೋಜನೆಗಳು ಸಂಚು ನಡೆಸುತ್ತಿವೆಯೋ ಎಂಬೊಂದು ಅನುಮಾನ ಕಾಡುತ್ತಿದೆ.

ಸಾಮ್ರಾಜ್ಯಶಾಹಿತ್ವದ ಸುಳ್ಳುಗಳನ್ನು ಬಹಿರಂಗಪಡಿಸಬೇಕಾದ ಧರ್ಮಗಳು ಸ್ವಯಂ ತಿಕ್ಕಾಟದಲ್ಲಿ ತೊಡಗಿದಾಗ ಅವು ನಿಜವಾಗಿ ಯಾವ ವಿಷಯವನ್ನು ಎತ್ತಿಕೊಂಡು ಇಲ್ಲಿ ಹೋರಾಡಬೇಕಿತ್ತೋ ಅದನ್ನು ಮರೆತು ತಮ್ಮ ತಮ್ಮಲ್ಲಿ ಗುದ್ದಾಡುವಂತಾಗುತ್ತದಡ. ನಿಜವಾಗಿ ಇವತ್ತು ಯಾವುದೆ ಧರ್ಮಾನುಯಾಯಿ ಸಾಮ್ರಾಜ್ಯಶಾಹಿತ್ವದ ಬಗ್ಗೆ ಸರಿಯಾಗಿ ಅರಿತುಕೊಂಡರೆ ಆತ ಖಂಡಿತ ಇನ್ನೊಂದು ಧರ್ಮವನ್ನು ದ್ವೇಶಿಸುವ ಬದಲು ಸಾಮ್ರಾಜ್ಯಶಾಹಿತ್ವ ಹುಟ್ಟುಹಾಕುತ್ತಿರುವ ಭ್ರಮೆಗಳು ಮತ್ತು ಅವುಗಳಿಂದಾಗಿ ಜನರು ಸ್ವೇಚ್ಛಾಚಾರಿಗಲಾಗುತ್ತಿರುವುದರ ವಿರುದ್ಧ ಹೋರಾಡುತ್ತದ್ದ.

ನಿಜವಾಗಿ ಕಳ್ಳ ಭಟ್ಟಿ ಇದೆ. ಸಕಲ ಕೆಡುಕುಗಳ ತಾಯಿ ಎಂದು ಧರ್ಮಗಳು ಬಣ್ಣಿಸಿದ ಮದ್ಯ ಇದೆ, ಲಾಟರಿ ಇದೆ, ಜೂಜು ಇದೆ, ಕೆಡುಕಿನ ಸಾವಿರ ಸಾವಿರ ನಮೂನೆಗಳಿವೆ. ಅದ್ಭುತ ಏನೆಂದರೆ, ಕಳ್ಳಭಟ್ಟಿ ತಯಾರಿಸುವವ ಇನ್ನೊಬ್ಬ ಕಳ್ಳಭಟ್ಟಿ ತಯಾರಿಸುವವನ ಮೇಲೆ ಮುಗಿ ಬಿದ್ದು ಕೊಲ್ಲುದಿಲ್ಲ. ಒಂದು ಮಧ್ಯದಂಗಡಿಮೂಲಕ ಇನ್ನೊಂದು ಮಧ್ಯದಂಗಡಿಯನ್ನು ನಾಶಪಡಿಸುವುದಿಲ್ಲ. ಸಿಕ್ಕಿಂ ಲಾಟರಿ, ನಾಗಲ್ಯಾಂಡ್ ಲಾಟರಿಯನ್ನು ಮುಗಿಸಲು ನೋಡುವುದಿಲ್ಲ ಹೀಗೆ ನಾವು ಯಾವುದನ್ನೆಲ್ಲ ಧರ್ಮ ವಿರೋಧಿ, ಕೆಡುಕು ಎಂದು ಭಾವಿಸಿದ್ದೇವೆಯೋ ಅವೆಲ್ಲ ಬಹಳ ಒಗ್ಗಟ್ಟಿನಿಂದ ಕಾರ್ಯಚರಿಸುತ್ತಾ ಇವೆ. ಆದರೆ ಯಾವ ಕೆಡುಕುಗಳನ್ನು ಭೋಧಿಸದ ಮತ್ತು ಒಳ್ಳೆಯದನ್ನೇ ಸಾರುವ ಧರ್ಮಾನುಯಾಯಿಗಳ ಮಧ್ಯೆ ಈ ಪಾವನ ಧರ್ಮದ ಹೆಸರಿನಲ್ಲಿ ಗಲಭೆ ಹೇಗುಂಟಾಗುತ್ತದೆ. ನಿಜವಾಗಿ ಈ ಧರ್ಮಾನಿಯಾಯಿಗಳೆಲ್ಲ ಈ ಕೆಡುಕುಗಳ ವಿರುದ್ಧ ಒಗ್ಗಟ್ಟಾಗಿ ಹೋರಾಡಬೇಕಿತ್ತು.

ಈ ನಿಟ್ಟಿನಲ್ಲಿ ಸೇವೆ ಎಂಬುದು ಬಹಳ ಪ್ರಮುಖವಾದ ಅಸ್ತ್ರ. ಅದು ಕೇವಲ ಒಂದು ಕೋಮಿನ, ಒಂದು ಧರ್ಮದ ಪಾಲಿಗೆ ಮಾತ್ರ ಸೀಮಿತವಾಗಬಾರದು. ಎಲ್ಲರೂ ದೇವರ ಸೃಷ್ಟಿಗಳು, ಹುಟ್ಟುವಾಗ ಎಲ್ಲರೂ ಪ್ರಕೃತಿ ಧರ್ಮದಲ್ಲಿ ಹುಟ್ಟಿದ್ದಾರೆ. ಆ ಬಳಿಕ ಅವರ ತಂದೆ-ತಾಯಿಗಳು ಅವರನ್ನು ವಿವಿಧ ಧರ್ಮ ಪಂಗಡಗಳಲ್ಲಿ ಲೀನಗೊಳಿಸುತ್ತಾರೆ ಎಂದು ಪವಿತ್ರ ಕುರ್‌ಆನ್ ಹೇದೆ. ಆದ್ದರಿಂದ ಇಸ್ಲಾಮ್ ಎಲ್ಲರ ಸೇವೆ ಮಾಡಬೇಕೆಂದು ಎಲ್ಲರ ಕೈ ಕಾರ್ಯಕ್ಕಾಗಿ ದುಡಿಯಬೇಕೆಂದು ಆಜ್ಞಾಪಿಸುತ್ತದೆ. ಇಂದಿನ ಕಲುಶಿತ ವಾತಾವರಣದಲ್ಲಿ ದೇಶ ಬಾಂಧವರೊಂದಿಗೆ ಒಳ್ಳೆಯ ಸಂಪರ್ಕ ಇಟ್ಟುಕೊಂಡು ಸೇವಾವ್ಯಾಪ್ತಿಯನ್ನು ಅವರ ಬಳಿ ಕೊಂಡೊಯ್ಯುವುದು ಬಹಳ ಅಗತ್ಯದ್ದು. ಇದು ಒಂದೊಳ್ಳೆಯ ವಾತಾವರಣಕ್ಕೂ, ದೇವ ಪ್ರೇಮಕ್ಕೂ ಖಂಡಿತ ಒಳಗಾಗಲು ಸಹಕಾರವಾದೀತು.

ಕೆಡುಕುಗಳ ವಿರುದ್ಧ ಹೋರಾಡುವುದು ಮತ್ತು ಸೇವಾ ವ್ಯಾಪ್ತಿಯನ್ನು ಸರ್ವಜನರ ಪಾಲಿಗೆ ವಿಸ್ತರಿಸುವುದು, ಇಂದಿನ ಸ್ವಾರ್ಥ ಜನರಲ್ಲಿ ದೊಡ್ಡದೊಂದು ಕ್ರಾಂತಿಕಾರಿ ಪ್ರಯತ್ನವಾಗಿದೆ. ಭೌತಿಕ ಜಗತ್ತಿನ ಸುಳ್ಳುಗಳನ್ನು ಬಹಿರಂಗಪಡಿಸುತ್ತ ಸಮಾಜದ ಎಲ್ಲರನ್ನು ನಮ್ಮವರು ಎಂದು ನಂಬುತ್ತಾ ಅವರೆಲ್ಲರ ಸಮಸ್ಯೆಗಳು ನಮ್ಮ ಸಮಸ್ಯೆಯೆಂದು ಅಂದುಕೊಳ್ಳುತ್ತಾ ಸಾಗಿದಾಗ ಸರ್ವರು ನಮ್ಮವರಾಗತ್ತಾರೆ. ಘರ್ಷಣೆಗೆ ಬಯಸುವ ಮಂದಿ ಸೋಲುತ್ತಾರೆ. ಮುಸ್ಲಿಮ್ ವೆಲ್‌ಫೇರ್ ಎಸೋಸಿಯೇಶನ್ ಈ ನಿಟ್ಟಿನಲ್ಲಿ ತನ್ನನ್ನು ಅರ್ಪಿಸಿಕೊಳ್ಳಲಿ.

**ಏ.ಕೆ. ಕುಕ್ಕಿಲ**
ಸಂಪಾದಕರು
ಸನ್ಮಾರ್ಗ ವಾರಪತ್ರಿಕೆ, ಮಂಗಳೂರು